ಓ ಎಸ್ ನಂ.67/2024
ಡಿ.ಡಬ್ಲ್ಯೂ-1 ಮಲ್ಲಮ್ಮ ಗಂಡ ಶಂಕರ ಕೊಳ್ಳೂರ

**(ಇಂದು ದಿನಾಂಕಃ 31-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಡಿ ಬಿ ಪಿ ವಕೀಲರಿಂದ.

೧ನೇ ಪ್ರತಿವಾದಿ ಮಹಾದೇವಪ್ಪರವರು ಜಮೀನು ಖರೀದಿ ಮಾಡಿದ ನಂತರ ನನಗೆ ಪರಿಚಯ ಆಗಿರುತ್ತಾರೆ. ಖರೀದಿ ಮಾಡಿಕೊಳ್ಳುವಾಗ ೧ನೇ ಪ್ರತಿವಾದಿ ಮಹಾದೇವಪ್ಪರವರಿಗೆ ಇರುವ ಮಕ್ಕಳ ಕುರಿತು ವಿಚಾರ ಮಾಡಿರುತ್ತೇವೆ. ಸಾಕ್ಷಿಯು ಪ್ರಿಯಾಂಕಾ ಎಂಬ ಒಬ್ಬಳು ಮಗಳು ಇರುತ್ತಾಳೆ ಎಂದು ಗೊತ್ತಾಗಿರುತ್ತದೆ ಎನ್ನುತ್ತಾರೆ. ನಾವು ಖರೀದಿ ಪತ್ರಕ್ಕೆ ೧ನೇ ಪ್ರತಿವಾದಿಯ ಮಗಳಾದ ವಾದಿಯ ಸಹಿಯನ್ನು ಪಡೆದಿರುವುದಿಲ್ಲ. ವಾದಿಯ ಸಮ್ಮತಿಯನ್ನು ನೀಡುವಂತೆ ಕೇಳಿ ನಾವು ವಾದಿಗೆ ನೋಟಿಸು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಅದೆಲ್ಲಾ ನಮ್ಮ ಮನೆಯವರಿಗೆ ಗೊತ್ತು ಎನ್ನುತ್ತಾರೆ. ವಾದಿ ಪ್ರಿಯಾಂಕಾರವರ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿಯ ಗಂಡು ಮಕ್ಕಳಾದ ೨ ಮತ್ತು ೩ನೇ ಪ್ರತಿವಾದಿಗಳ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ ೭೯/೨ ರ ೫ ಎಕರೆ ೨೪ ಗುಂಟೆ ಜಮೀನು ಮಾರಾಟ ಮಾಡಿ, ದಾವಾ ಜಮೀನು ಖರೀದಿಸಿದ್ದೇವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

೨. ಖರೀದಿ ಪತ್ರದಲ್ಲಿ ೧ನೇ ಪ್ರತಿವಾದಿ ಯಾವ ಉದ್ದೇಶಕ್ಕಾಗಿ ಜಮೀನು ಮಾರಾಟ ಮಾಡುತ್ತಿದ್ದಾರೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಮಗಳು ಮದುವೆಗೆ ಎಂದು ನಮಗೆ ಹೇಳಿರುತ್ತಾರೆ ಎನ್ನುತ್ತಾರೆ. ಖರೀದಿ ಪತ್ರ ಟೈಪ್ ಮಾಡಲು ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾವೇ ನೀಡಿರುತ್ತೇವೆ, ಅದು ನನ್ನ ಗಂಡನಿಗೆ ಮಾಹಿತಿ ಇರುತ್ತದೆ

ಎನ್ನುತ್ತಾರೆ. ವಾದಿಯ ಸಹಿಯನ್ನು ಖರೀದಿ ಪತ್ರಕ್ಕೆ ಪಡೆಯಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ೧ನೇ ಪ್ರತಿವಾದಿ ನಾನು ಹೇಳಿದಂತೆ ನನ್ನಮಗಳು ಕೇಳುತ್ತಾಳೆ ಮತ್ತು ನನ್ನಮಗಳ ಮದುವೆಗೆ ಹಣ ಬೇಕಾಗಿದೆ ಎಂದು ಹೇಳಿದ್ದರಿಂದ ನಾವು ವಾದಿಯ ಸಹಿ ಪಡೆದಿಲ್ಲ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.